ಅ) ಉತ್ತರ ಕನ್ನಡ ಜಿಲ್ಲೆಯಿಂದ ಎಷ್ಟು ಅರ್ಜಿಗಳು ಅಕಾಡೆಮಿ ಪ್ರಶಸ್ತಿ ಕೋರಿ ಬಂದಿದ್ದವು ಹಾಗೂ ಹಿಂದುಳಿದ ವರ್ಗಕ್ಕೆ ಸೇರಿದವರ ಅರ್ಜಿಗಳ ಸಂಖ್ಯೆ ಎಷ್ಟು.

ಇ) ಉತ್ತರ ಕನ್ನಡ ಜಿಲ್ಲೆಗೆ ಸೇರಿದವರಲ್ಲಿ ಪ್ರಶಸ್ತಿ ಪಡೆದ ಹರಿಜನ ಗಿರಿಜನ ಹಿಂದುಳಿದ ಅಲ್ಪ ಸಂಖ್ಯಾತ ವಂಗಡಕ್ಕೆ ಸೇರಿದವರ ಸಂಖ್ಯೆ ಎಷ್ಟು ?

ಶ್ರೀ ಜೀವರಾಜ ಆಳ್ವ (ವಾರ್ತಾ, ಪ್ರವಾಸೋದ್ಯಮ ಹಾಗೂ ಯುವಜನ ಸೇವಾ ರಾಜ್ಯ ಸಚಿವರು).—

ಅ) ೧೧೭ ಜನರಿಗೆ.

ಆ) ಅಕಾಡೆಮಿಯು ಪ್ರಶಸ್ತಿಗಾಗಿ ಅರ್ಜಿಗಳನ್ನು ಸ್ವೀಕರಿಸುವ ಪದ್ಧತಿ ಜಾರಿಯಲ್ಲಿಲ್ಲ. ಸಾಹಿತ ಕ್ಷೇತ್ರದಲ್ಲಿ ಅಮೋಘ ಸೇವೆ ಸಲ್ಲಿಸಿದ ಸಾಹಿತಿಗಳನ್ನು ಪ್ರತಿ ವರ್ಷ ಅಕಾಡೆಮಿಯು ಸರ್ವ ಸದಸ್ಯರ ಸಭೆಯಲ್ಲಿ ಆಯ್ಕೆ ಮಾಡಲಾಗುತ್ತಿದೆ.

ಇ) ಜಾತಿ ಆಧರಿಸಿ, ಅಕಾಡೆಮಿ ಪ್ರಶಸ್ತಿ ನೀಡುತ್ತಿಲ್ಲ.

## ಮುಂಧೋಳ್ ತಾಲ್ಲೂಕು ಬೆಳಗಲಿ ಗ್ರಾಮಕ್ಕೆ ಪ್ರಾಥಮಿಕ ಆರೋಗ್ಯ ಘಟಕದ ಮಂಜೂರಾತಿ

೯೩೬. ಶ್ರೀ ಬಿ. ಜಿ. ಜವಳಿ (ಮುಧೋಳ್).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮುಧೋಳ್ ತಾಲ್ಲೂಕು ಬೆಳಗಲಿ ಗ್ರಾಮಕ್ಕೆ ಪ್ರಾಥಮಿಕ ಆರೋಗ್ಯ ಘಟಕ ಯಾವಾಗ ಮಂಜೂರು ಆಯಿತು ?

ಆ) ಆಲ್ಲಿನ ಆಸ್ಪತ್ರೆಯ ನಿರ್ಮಾಣ ಯಾವಾಗ ಪೂರ್ತಿ ಆಗುವುದು ?

ಶ್ರೀ ಹೆಚ್. ಎಲ್. ತಿಮ್ಮೇಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

ಅ) ದಿನಾಂಕ ೨೩-೩-೧೯೮೨ರಂದು.

ಆ) ಈ ಕಾಮಗಾರಿಗೆ ಲೋಕೋಪಯೋಗಿ ಇಲಾಖೆಯು ಟೆಂಡರ್‌ಗಳನ್ನು ಕರೆದಿದೆ. ಗುತ್ತಿಗೆ ದಾರರನ್ನು ಗೊತ್ತುಪಡಿಸಿ ಕಟ್ಟಡದ ಕಾರ್ಯವನ್ನು ಕೈಗೊಂಡು ಪ್ರಾರಂಭಿಸಿದಂದಿನಿಂದ ಸುಮಾರು ೧ ಅಥವಾ ೧½ ವರ್ಷಗಳಲ್ಲಿ ಪೂರೈಸುವರು.

## ಕುಟುಂಬ ಕಲ್ಯಾಣ ಶಸ್ತ್ರಚಿಕಿತ್ಸೆಗೆ ಒಳಪಟ್ಟವರಿಗೆ ವಿಶ್ರಾಂತಿ ವೇತನ

೯೩೭. ಶ್ರೀ ಕೆ. ಕಾಶಾಲ(ಸುಳ್ಯ).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕುಟುಂಬ ಕಲ್ಯಾಣ ಶಸ್ತ್ರ ಚಿಕಿತ್ಸೆ ಹಾಗೂ ಶಸ್ತ್ರ ಕ್ರಿಯೆಯನ್ನು ಪಡೆದ ಪಡೆಯಲಿರುವ ಅರ್ಹ ಬಡ ದಂಪತಿಗಳಲ್ಲಿ ಶಸ್ತ್ರ ಚಿಕಿತ್ಸೆಗೆ ಒಳಪಟ್ಟವರಿಗೆ ಮಾಸಿಕ ರೂ. ೫೦-೦೦ ಅಥವಾ ಒಕ್ಕರಂತೆ ವಿಶ್ರಾಂತಿ ವೇತನ ನೀಡುವ ವ್ಯವಸ್ಥೆಯನ್ನು ಮಾಡಲು ಸರ್ಕಾರದವರು ಉದ್ದೇಶಿಸಿರುವರೆ ?

ಶ್ರೀ ಹೆಚ್. ಎಲ್. ತಿಮ್ಮೇಗೌಡ(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).—

ಅ) ಇಲ್ಲ.

## ಉತ್ತರ ಕನ್ನಡ ಜಿಲ್ಲೆಯ ಸಿರ್ಸಿಯಲ್ಲಿರುವ ಸಾರ್ವತ್ರಿಕ ಆಸ್ಪತ್ರೆಯ ಕುರಿತು.

೯೩೮. ಶ್ರೀ ಗೋಪಾಲ ಮುಕುಂದ ಕಾನಡೆ(ಸಿರ್ಸಿ).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸಿರ್ಸಿ ಸಾರ್ವಜನಿಕ ಆಸ್ಪತ್ರೆಗೆ ಸರ್ಕಾರದವರಿಂದ ಏನಾದರೂ ಹಣ ಮಂಜೂರಾಗಿದೆಯೇ ?